# ಕರ್ನಾಟಕದ ಉನ್ನತ ಶಿಕ್ಷಣದಲ್ಲಿ ಇ–ಆಡಳಿತ ಸುಧಾರಣೆಗಳು: ಒಂದು ವಿಶ್ಲೇಷಣೆ

**ರಾಮಚಂದ್ರ**

ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ.

**DOI: https://doi.org/10.5281/zenodo.18850776**

**ABSTRACT:**

ಪ್ರಸ್ತುತ ಲೇಖನವು ಕರ್ನಾಟಕದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿನ ಇ–ಆಡಳಿತ ಸುಧಾರಣೆಗಳನ್ನು, ವಿಶೇಷವಾಗಿ 'ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯ' (UUCMS) ಅನುಷ್ಠಾನ ಮತ್ತು ಅದರ ಪ್ರಭಾವಗಳನ್ನು ವಿಶ್ಲೇಷಿಸುತ್ತದೆ. ಪ್ರವೇಶಾತಿ, ಶೈಕ್ಷಣಿಕ ನಿರ್ವಹಣೆ, ಪರೀಕ್ಷೆ ಮತ್ತು ಮಾನವ ಸಂಪನ್ಮೂಲಗಳನ್ನು ಒಂದೇ ಕೇಂದ್ರೀಕೃತ ವೇದಿಕೆಯಡಿ ತರುವ ಮೂಲಕ ಉನ್ನತ ಶಿಕ್ಷಣದ ಸಂಪೂರ್ಣ ಆಡಳಿತವನ್ನು ಡಿಜಿಟಲೀಕರಣಗೊಳಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಇದು ಕಾಗದರಹಿತ ಆಡಳಿತದ ಮೂಲಕ ಪಾರದರ್ಶಕತೆಯನ್ನು ಹೆಚ್ಚಿಸಿ, ವಿಳಂಬ ಮತ್ತು ಭ್ರಷ್ಟಾಚಾರವನ್ನು ಕಡಿಮೆ ಮಾಡುವಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ. ಆದರೆ, ತಾಂತ್ರಿಕ ದೋಷಗಳು, ಸರ್ವರ್ ಸಮಸ್ಯೆಗಳು, ಗ್ರಾಮೀಣ ಭಾಗದ ಡಿಜಿಟಲ್ ಅಂತರ ಮತ್ತು ಸಿಬ್ಬಂದಿಗೆ ತರಬೇತಿಯ ಕೊರತೆಯಂತಹ ಗಂಭೀರ ಸವಾಲುಗಳನ್ನು ಈ ವ್ಯವಸ್ಥೆ ಎದುರಿಸುತ್ತಿದೆ. ಸಹಾಯವಾಣಿ ಸ್ಥಾಪನೆ, ಆಫ್‌ಲೈನ್ ಸೌಲಭ್ಯ ಮತ್ತು ನಿರಂತರ ತರಬೇತಿಯ ಮೂಲಕ ಈ ಲೋಪಗಳನ್ನು ಸರಿಪಡಿಸಿ, ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸುವ ಅಗತ್ಯವನ್ನು ಲೇಖನವು ಒತ್ತಿಹೇಳುತ್ತದೆ.

**KEYWORDS:**

ಯುಯುಸಿಎಮ್‌ಎಸ್, ಇ–ಆಡಳಿತ, ಉನ್ನತ ಶಿಕ್ಷಣ, ಡಿಜಿಟಲ್ ರೂಪಾಂತರ, ಡಿಜಿಟಲ್ ಅಂತರ.

## ಪೀಠಿಕೆ

ಪ್ರಾಯೋಗಿಕ ಉದ್ದೇಶಗಳಿಗಾಗಿ ಅಂದರೆ ದೈನಂದಿನ ಜೀವನದಲ್ಲಿ ಬಳಸುವ ಕಲೆ, ಕೌಶಲ್ಯ ತಂತ್ರಗಳು ಮತ್ತು ಪ್ರಕ್ರಿಯೆಗಳ ಸಂಯೋಜನೆಗಾಗಿ ವೈಜ್ಞಾನಿಕ ಜ್ಞಾನವನ್ನು ಬಳಸುವುದಕ್ಕೆ ತಂತ್ರಜ್ಞಾನ ಎನ್ನುತ್ತೇವೆ. ಈ ತಂತ್ರಜ್ಞಾನವು ಯಂತ್ರಗಳು, ಉಪಕರಣಗಳು, ಸಾಫ್ಟ್‌ವೇರ್ ಮತ್ತು ವ್ಯವಸ್ಥೆಗಳ ರೂಪದಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಕೆಲಸಗಳನ್ನು ಸುಲಭಗೊಳಿಸಲು ಸಹಕಾರಿಯಾಗುತ್ತದೆ. ಆರೋಗ್ಯ, ಶಿಕ್ಷಣ, ಕಂದಾಯ, ಲೋಕೋಪಯೋಗಿ, ಸಾರಿಗೆ, ವೈದ್ಯಕೀಯ, ಬಾಹ್ಯಾಕಾಶ ಮುಂತಾದ ಹಲವು ಕ್ಷೇತ್ರಗಳಲ್ಲಿ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸಲಾಗುತ್ತಿದ್ದು, ಇಂದಿನ ಡಿಜಿಟಲ್ ಯುಗದಲ್ಲಿ ಶಿಕ್ಷಣದ ಗುಣಮಟ್ಟ ಮತ್ತು ಆಡಳಿತಾತ್ಮಕ ವೇಗವನ್ನು ಹೆಚ್ಚಿಸುವ ಸಲುವಾಗಿಯೂ ತಂತ್ರಜ್ಞಾನದ ಬಳಕೆ ಅನಿವಾರ್ಯ. ಕರ್ನಾಟಕ ಸರ್ಕಾರವು 'ಡಿಜಿಟಲ್ ಕರ್ನಾಟಕ' ಎಂಬ ಪರಿಕಲ್ಪನೆಯಡಿ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಆಧುನೀಕರಿಸಲು ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (ಯುಯುಸಿಎಮ್‌ಎಸ್) ಯಂತಹ ಹಲವು ಕ್ರಾಂತಿಕಾರಕ

ಯೋಜನೆಗಳನ್ನು ಜಾರಿಗೆ ತಂದಿದ್ದು, ಸರ್ಕಾರದ ಈ ಯೋಜನೆಗಳು ವಿದ್ಯಾರ್ಥಿಗಳು, ಬೋಧಕರು ಮತ್ತು ಆಡಳಿತ ಮಂಡಳಿಗಳ ಮೇಲೆ ಬೀರುವ ಪ್ರಭಾವವನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

**ಉನ್ನತ ಶಿಕ್ಷಣದಲ್ಲಿ ಇ–ಆಡಳಿತದ ಪ್ರಮುಖ ಉಪಕ್ರಮಗಳು**

1. ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (ಯುಯುಸಿಎಮ್‌ಎಸ್):– ಇದು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಒಂದು ಪ್ರಮುಖ ಡಿಜಿಟಲ್ ಉಪಕ್ರಮವಾಗಿದ್ದು, ಅತ್ಯಂತ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ.
2. ಒಂದೇ ಸೂರಿನಡಿ ಎಲ್ಲ ಸೇವೆ:– ಪ್ರವೇಶ ಪ್ರಕ್ರಿಯೆ, ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್, ಸೇವಾಸಿಂಧು, ಕಲಿಕಾ ನಿರ್ವಹಣಾ ವ್ಯವಸ್ಥೆ, ಪರೀಕ್ಷಾ ನಿರ್ವಹಣೆ, ಅಂಕಪಟ್ಟಿ ವಿತರಣೆ ಮತ್ತು ಬೋಧಕರ ವಿವರಗಳು ಒಂದೇ ಸೂರಿನಡಿ ಲಭ್ಯವಾಗುತ್ತಿವೆ.
3. ದತ್ತಾಂಶದ ಸಮಗ್ರತೆ:– ಕರ್ನಾಟಕ ಉನ್ನತ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಯ ಮಾಹಿತಿ, ದಾಖಲಾತಿ, ಸೇವಾ ದಾಖಲಾತಿಗಳು ಮುಂತಾದವುಗಳನ್ನು ಡಿಜಿಟಲೀಕರಣಗೊಳಿಸಲಾಗಿದ್ದು, ರಾಜ್ಯದ ಸುಮಾರು 33ಕ್ಕೂ ಹೆಚ್ಚು ಸಾರ್ವಜನಿಕ ವಿಶ್ವವಿದ್ಯಾಲಯಗಳು ಮತ್ತು 3500ಕ್ಕೂ ಹೆಚ್ಚು ಕಾಲೇಜುಗಳನ್ನು ಸಂಯೋಜಿಸಲಾಗಿದೆ.

ಉನ್ನತ ಶಿಕ್ಷಣದಲ್ಲಿ ಕ್ರಾಂತಿಕಾರಿ ಹೆಜ್ಜೆ: ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ಒಂದು ಸಮಗ್ರ ವಿಶ್ಲೇಷಣೆ

ಕರ್ನಾಟಕ ಸರ್ಕಾರವು ಉನ್ನತ ಶಿಕ್ಷಣ ಇಲಾಖೆಯ ಮೂಲಕ ಜಾರಿಗೆ ತಂದಿರುವ ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (ಯುಯುಸಿಎಮ್‌ಎಸ್) ಭಾರತದಲ್ಲೇ ಮೊದಲ ಪ್ರಯತ್ನವಾಗಿದೆ. ಇದು ರಾಜ್ಯದ ಉನ್ನತ ಶಿಕ್ಷಣದ ಸಂಪೂರ್ಣ ''ಜೀವನ ಚಕ್ರ''ವನ್ನು ಡಿಜಿಟಲೀಕರಣಗೊಳಿಸಿದೆ.

**1. ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯ (ಯುಯುಸಿಎಮ್‌ಎಸ್) ಪ್ರಮುಖ ಉದ್ದೇಶಗಳು**

I. ಕೇಂದ್ರೀಕೃತ ವ್ಯವಸ್ಥೆ: ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳನ್ನು ಒಂದೇ ತಂತ್ರಾಂಶದ ಅಡಿಯಲ್ಲಿ ತರುವುದು.

II. ಪಾರದರ್ಶಕತೆ: ಪ್ರವೇಶಾತಿಯಿಂದ ಹಿಡಿದು ಪದವಿ ಪ್ರದಾನದವರೆಗೆ ಎಲ್ಲೂ ಮಾನವ ಹಸ್ತಕ್ಷೇಪವಿಲ್ಲದಂತೆ ಮಾಡುವುದು.

III. ದತ್ತಾಂಶದ ಏಕರೂಪತೆ: ವಿದ್ಯಾರ್ಥಿಯ ಮಾಹಿತಿ ಒಂದು ವಿಶ್ವವಿದ್ಯಾಲಯದಿಂದ ಇನ್ನೊಂದಕ್ಕೆ ವರ್ಗಾವಣೆಯಾದಾಗ (ಮೈಗ್ರೇಶನ್) ದತ್ತಾಂಶ ಬದಲಾಗದಂತೆ ನೋಡಿಕೊಳ್ಳುವುದು.

**2. ವ್ಯವಸ್ಥೆಯ ಪ್ರಮುಖ ಘಟಕಗಳು**

ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (ಯುಯುಸಿಎಮ್‌ಎಸ್) ಕೇವಲ ಒಂದು ವೆಬ್‌ಸೈಟ್ ಅಷ್ಟೇ ಅಲ್ಲ, ಅದು ಈ ಕೆಳಗಿನ ಪ್ರಮುಖ ಘಟಕಗಳನ್ನು ಒಳಗೊಂಡಿದೆ:

I. ವಿದ್ಯಾರ್ಥಿ ಲಾಗಿನ್ (ಸ್ಟುಡೆಂಟ್ ಪೋರ್ಟಲ್) : ಉನ್ನತ ಶಿಕ್ಷಣಕ್ಕೆ ಪ್ರವೇಶ ಅರ್ಜಿ ಸಲ್ಲಿಸುವುದು, ಶುಲ್ಕ ಪಾವತಿ, ಪರೀಕ್ಷಾ ಅರ್ಜಿ, ಹಾಲ್–ಟಿಕೆಟ್ ಡೌನ್‌ಲೋಡ್ ಮತ್ತು ಫಲಿತಾಂಶ ವೀಕ್ಷಣೆಯಂತಹ ಸೇವೆಗಳನ್ನು ಪಡೆಯಲು ಸಹಕಾರಿಯಾಗಿದೆ.

II. ಶೈಕ್ಷಣಿಕ ನಿರ್ವಹಣೆ : ಪಠ್ಯಕ್ರಮದ ವಿನ್ಯಾಸ, ವಿಷಯಗಳ ಆಯ್ಕೆ (ಎಲೆಕ್ಟಿವ್ಸ್), ಮತ್ತು ಕ್ರೆಡಿಟ್ ಆಧಾರಿತ ವ್ಯವಸ್ಥೆ (ಸಿ.ಬಿ.ಸಿ.ಎಸ್.) ಗಳಂತಹ ಸೇವೆಗಳನ್ನು ಪಡೆಯಬಹುದಾಗಿದೆ.

III. ಪರೀಕ್ಷಾ ಘಟಕ : ಪ್ರಶ್ನೆ ಪತ್ರಿಕೆ ಸಿದ್ಧತೆ, ಆಂತರಿಕ ಅಂಕಗಳ ದಾಖಲಾತಿ ಮತ್ತು ಡಿಜಿಟಲ್ ಮೌಲ್ಯಮಾಪನ ಮುಂತಾದ ಸೇವೆಗಳು ಇಲ್ಲಿ ಲಭ್ಯವಿರುತ್ತದೆ.

IV. ಮಾನವ ಸಂಪನ್ಮೂಲ ಎಚ್‌ಆರ್‌ಎಮ್‌ಎಸ್ : ಬೋಧಕರ ನೇಮಕಾತಿ ವಿವರ, ವರ್ಗಾವಣೆ, ಮತ್ತು ಸೇವಾ ದಾಖಲೆಗಳ ನಿರ್ವಹಣೆಗೆ ಉಪಯುಕ್ತವಾಗಿದೆ.

## 3. ಸಂಶೋಧನಾ ದೃಷ್ಟಿಕೋನದಿಂದ ವಿಶ್ಲೇಷಣೆ

| ಸಕಾರಾತ್ಮಕ ಅಂಶಗಳು | ಸವಾಲುಗಳು |
|---|---|
| ಮಾಹಿತಿ ವಿಶ್ಲೇಷಣೆ : ಉನ್ನತ ಶಿಕ್ಷಣದ ದಾಖಲಾತಿ ಪ್ರಮಾಣ ಮತ್ತು ವಿದ್ಯಾರ್ಥಿಗಳ ಪ್ರಗತಿಯನ್ನು ನೈಜ ಸಮಯದಲ್ಲಿ ವಿಶ್ಲೇಷಿಸಲು ಸರ್ಕಾರಕ್ಕೆ ತುಂಬಾ ಉಪಕಾರಿಯಾಗಿದೆ. | ಜಾಲಾ ಪೂರೈಕೆಯ ಸಮಸ್ಯೆ (ಸರ್ವರ್ ಸಮಸ್ಯೆ) : ಪರೀಕ್ಷಾ ಸಮಯದಲ್ಲಿ ಅಥವಾ ಫಲಿತಾಂಶದ ವೇಳೆ ಜಾಲಾ ಪೂರೈಕೆಯ ಸಮಸ್ಯೆ (ಸರ್ವರ್ ವೇಗ ಕಡಿಮೆಯಾಗುವುದು) ದೊಡ್ಡ ಸಮಸ್ಯೆಯಾಗಿದೆ. |
| ಆರ್ಥಿಕ ದಕ್ಷತೆ : ಪ್ರತಿ ವಿಶ್ವವಿದ್ಯಾಲಯವು ಪ್ರತ್ಯೇಕವಾಗಿ ತಮ್ಮದೇ ತಂತ್ರಾಂಶ ಅಭಿವೃದ್ಧಿಪಡಿಸುವ ಗೋಜಿಗೆ ಹೋಗದೆ ಇರುವುದರಿಂದ ಕೋಟ್ಯಂತರ ರೂಪಾಯಿ ವೆಚ್ಚ ತಪ್ಪಿದೆ. | ಒಳಗೊಳ್ಳುವಿಕೆ : ಇಂಟರ್ನೆಟ್ ಸೌಲಭ್ಯವಿಲ್ಲದ ಗ್ರಾಮೀಣ ವಿದ್ಯಾರ್ಥಿಗಳಿಗೆ ಸೈಬರ್ ಕೆಫೆಗಳ ಮೇಲೆ ಅವಲಂಬಿತರಾಗಬೇಕಾದ ಅನಿವಾರ್ಯತೆ ಇದ್ದು ನಿರೀಕ್ಷಿತ ಯಶಸ್ಸನ್ನು ಸಾಧಿಸಲು ತ್ರಾಸದಾಯಕವೆನಿಸುತ್ತಿದೆ. |
| ಸಮಗ್ರತೆ: ಅಂಕಪಟ್ಟಿಗಳ ನಕಲು ತಡೆಯಲು ಮತ್ತು 'ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ಸ್' (ಎ.ಬಿ.ಸಿ.) ಗೆ ಪೂರಕವಾಗಿದೆ. | ಬದಲಾವಣೆಗೆ ಪ್ರತಿರೋಧ: ಹಳೆಯ ಆಡಳಿತ ಪದ್ಧತಿಗೆ ಒಗ್ಗಿಕೊಂಡಿರುವ ಸಿಬ್ಬಂದಿಯು ತಂತ್ರಜ್ಞಾನ ಬಳಸುವಿಕೆಗೆ ಸಂಬಂಧಿಸಿದಂತೆ ಹಿಂಜರಿಯುತ್ತಾರೆ. |

## 4. ಸುಧಾರಣೆಗಾಗಿ ಸಲಹೆಗಳು

- ಮೊಬೈಲ್ ಆಪ್: ಯುಯುಸಿಎಮ್‌ಎಸ್ ಅನ್ನು ಹೆಚ್ಚು ಬಳಕೆದಾರ ಸ್ನೇಹಿಯಾಗಿಸಲು ಅಧಿಕೃತ ಮೊಬೈಲ್ ಅಪ್ಲಿಕೇಶನ್ ಬಿಡುಗಡೆ ಮಾಡುವ ಮೂಲಕ ಸುಧಾರಣೆಗಳನ್ನು ತರುವುದು.
- ಹೆಲ್ಪ್ ಡೆಸ್ಕ್: ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ತಾಂತ್ರಿಕ ತೊಂದರೆಗಳನ್ನು ಪರಿಹರಿಸಲು

ಸಮರ್ಪಿತ ಹೆಲ್ಪ್ ಡೆಸ್ಕ್‌ಗಳನ್ನು (ಸಹಾಯವಾಣಿಗಳನ್ನು) ಸ್ಥಾಪಿಸುವುದು.

- ಜಾಲಬಂಧ ರಹಿತ ಕ್ರಮ (ಆಫ್‌ಲೈನ್ ಮೋಡ್): ಇಂಟರ್ನೆಟ್ ಇಲ್ಲದಿದ್ದರೂ ಕೆಲವು ದತ್ತಾಂಶಗಳನ್ನು ದಾಖಲಿಸಲು ಅನುಕೂಲವಾಗುವಂತೆ 'ಆಫ್-ಲೈನ್' ಸೌಲಭ್ಯ ಒದಗಿಸುವ ಮೂಲಕ ಸರ್ವರ್ ಸಮಸ್ಯೆಗಳಿಂದಾಗುವ ತೊಂದರೆಗಳನ್ನು ತಪ್ಪಿಸುವುದು.
- ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ಸ್ ಮತ್ತು ಡಿಜಿಲಾಕರ್ : ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ.2020) ಅನ್ವಯ, ವಿದ್ಯಾರ್ಥಿಗಳ ಶೈಕ್ಷಣಿಕ ಕ್ರೆಡಿಟ್‌ಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲು ಮತ್ತು ಅಂಕಪಟ್ಟಿಗಳನ್ನು ಸುರಕ್ಷಿತವಾಗಿಡಲು ಡಿಜಿಲಾಕರ್ ವ್ಯವಸ್ಥೆಯನ್ನು ಕಡ್ಡಾಯಗೊಳಿಸಲಾಗಿದ್ದು, ಈ ನಿಟ್ಟಿನಲ್ಲಿ ಮತ್ತಷ್ಟು ಕಾಳಜಿವಹಿಸುವ ಮೂಲಕ ನಕಲಿ ಅಂಕಪಟ್ಟಿಗಳ ಹಾವಳಿಯನ್ನು ತಪ್ಪಿಸಬಹುದಾಗಿದೆ.
- ಕಲಿಕಾ ನಿರ್ವಹಣಾ ವ್ಯವಸ್ಥೆ (ಎಲ್.ಎಮ್.ಎಸ್): ಸರ್ಕಾರಿ ಕಾಲೇಜುಗಳಲ್ಲಿ ಗುಣಮಟ್ಟದ ಡಿಜಿಟಲ್ ವಿಷಯವನ್ನು (ಇ-ಕಾಂಟೆಂಟ್) ಒದಗಿಸಲು ಎಲ್.ಎಮ್.ಎಸ್ ಜಾರಿಗೆ ತರಲಾಗಿದೆ. ಇದು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಉಪನ್ಯಾಸಗಳನ್ನು ವೀಕ್ಷಿಸಲು ನೆರವಾಗುತ್ತಿದೆ. ನಿರೀಕ್ಷಿತ ಯಶಸ್ಸನ್ನು ಸಾಧಿಸಲು ಈ ಕುರಿತಾಗಿ ಹೆಚ್ಚಿನ ಅರಿವು ಮೂಡಿಸಬೇಕಾಗಿದೆ.
- ನೇರ ನಗದು ವರ್ಗಾವಣೆ (ಡಿ.ಬಿ.ಟಿ.) ಮತ್ತು ವಿದ್ಯಾರ್ಥಿನಿಲಯಗಳ ಪ್ರವೇಶ : ಶಿಷ್ಯವೇತನ ವಿತರಣೆಯಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಆಧಾರ್ ಆಧಾರಿತ ಎಸ್‌ಎಸ್‌ಪಿ (ಸ್ಟೇಟ್ ಸ್ಕಾಲರ್‌ಶಿಪ್ ಪೋರ್ಟಲ್) ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಬಳಸುವುದು.

## 5. ಸುಧಾರಣೆಗಳ ಸಕಾರಾತ್ಮಕ ಪರಿಣಾಮಗಳು

- ಪಾರದರ್ಶಕತೆ:- ವಿದ್ಯಾರ್ಥಿಗಳ ಪ್ರವೇಶಾತಿ, ಶುಲ್ಕ ಮತ್ತು ಪರೀಕ್ಷಾ ವ್ಯವಸ್ಥೆ, ಪರೀಕ್ಷಾ ಫಲಿತಾಂಶಗಳು ಮತ್ತು ಅಧ್ಯಾಪಕರ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆ.
- ಸರಳ ಪ್ರಕ್ರಿಯೆ :- ವಿದ್ಯಾರ್ಥಿಗಳ ಶುಲ್ಕ ಮತ್ತು ಪರೀಕ್ಷಾ ಪ್ರಕ್ರಿಯೆಗಳನ್ನು ಸರಳೀಕರಣಗೊಳಿಸಲು ಅನುವಾಗುತ್ತದೆ.
- ಭ್ರಷ್ಟಾಚಾರಕ್ಕೆ ಕಡಿವಾಣ:- ಮಾನವ ಹಸ್ತಕ್ಷೇಪ ಕಡಿಮೆಯಾಗಿರುವ ಕಾರಣ ಭ್ರಷ್ಟಾಚಾರಕ್ಕೆ ಿವಾಣ ಬೀಳುತ್ತದೆ.
- ವಿಳಂಬವನ್ನು ತಪ್ಪಿಸಬಹುದು :- ಶುಲ್ಕ ಪಾವತಿ, ಫಲಿತಾಂಶ ಪ್ರಕಟಣೆ, ವಿದ್ಯಾರ್ಥಿ ವೇತನ ಮುಂತಾದವುಗಳಿಗೆ ಸಂಬಂಧಿಸಿದಂತೆ ವಿಳಂಬ ನೀತಿಯನ್ನು ಬಹುತೇಕ ತಪ್ಪಿಸಲಾಗಿದೆ.
- ವಿದ್ಯಾರ್ಥಿಗಳ ಮೇಲೆ ಮೇಲ್ವಿಚಾರಣೆಗೆ ಅನುವು ಮಾಡಿಕೊಡುತ್ತದೆ :- ವಿದ್ಯಾರ್ಥಿಗಳ ಹಾಜರಾತಿ, ಕಾರ್ಯಕ್ಷಮತೆ ಸೇರಿದಂತೆ ಪ್ರವೇಶದಿಂದ ಪದವಿ ಪ್ರದಾನದವರೆಗೂ ವಿದ್ಯಾರ್ಥಿಗಳ ಪ್ರಗತಿಯ ಮೇಲೆ ನಿಗಾ ಇಡಲು ಸಹಕಾರಿಯಾಗಿದೆ.
- ಡಿಜಿಟಲ್ ರೂಪಾಂತರ :- ಪ್ರವೇಶ ಮತ್ತು ಪರೀಕ್ಷಾ ನಿರ್ವಹಣೆಗೆ ಸಂಬಂಧಿಸಿದಂತೆ ಕಾಗದ ರಹಿತ ಆಡಳಿತವನ್ನು ಜಾರಿಗೆ ತಂದು ಹಸ್ತಚಾಲಿತ ಶ್ರಮವನ್ನು ತಪ್ಪಿಸಲಾಗಿದೆ.
- ಸಮಯ ಉಳಿತಾಯ:- ವಿದ್ಯಾರ್ಥಿಗಳು ಅಂಕಪಟ್ಟಿ ಅಥವಾ ಪ್ರಮಾಣಪತ್ರಗಳಿಗಾಗಿ

ವಿಶ್ವವಿದ್ಯಾಲಯಗಳಿಗೆ ಅಲೆಯುವ ಅಗತ್ಯವಿಲ್ಲದಂತಾಗಿದೆ.

- ನೈಜ ಸಮಯದ ದತ್ತಾಂಶ:– ಉನ್ನತ ಶಿಕ್ಷಣ ಇಲಾಖೆಯು ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಮತ್ತು ಮೂಲಸೌಕರ್ಯದ ಬಗ್ಗೆ ನಿಖರ ಮಾಹಿತಿ ಪಡೆಯಲು ಸಾಧ್ಯವಾಗಿದೆ.
- ದತ್ತಾಂಶ ಮೇಲ್ವಿಚಾರಣೆ :– ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ದೈನಂದಿನ ದತ್ತಾಂಶಗಳ ಮೇಲೆ ನಿಗಾ ಇಡಲು ಸಹಕಾರಿಯಾಗಿದೆ.
- ಸಂಪನ್ಮೂಲಗಳ ಏಕೀಕರಣ :– ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಸಾವಿರಾರು ಅಧ್ಯಾಪಕರಿಗೆ ಕರ್ನಾಟಕ ಕಲಿಕಾ ನಿರ್ವಹಣಾ ವ್ಯವಸ್ಥೆಯ ಮೂಲಕ ಡಿಜಿಟಲ್ ಸಂಪನ್ಮೂಲಗಳು ಲಭ್ಯವಾಗುತ್ತಿವೆ.

## 6. ಸವಾಲುಗಳು ಮತ್ತು ವಿಮರ್ಶಾತ್ಮಕ ನೋಟ

ಯಾವುದೇ ಸುಧಾರಣೆಗಳು ಸವಾಲುಗಳಿಂದ ಮುಕ್ತವಾಗಿರುವುದಿಲ್ಲ, ಕರ್ನಾಟಕದಲ್ಲಿರುವ ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯೂ ಹಲವಾರು ಸವಾಲುಗಳನ್ನು ಎದುರಿಸುತ್ತಿದೆ. ಇಲ್ಲಿನ ಹಲವಾರು ಸಮಸ್ಯೆಗಳಿಂದ ಬೇಸತ್ತ ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭೌತಿಕ ವ್ಯವಸ್ಥೆಗೆ ಮರಳಲು ಒತ್ತಾಯಿಸುತ್ತಿರುವುದು ಕಂಡುಬರುತ್ತಿದೆ. ಉನ್ನತ ಶಿಕ್ಷಣದಲ್ಲಿ ಇ–ಆಡಳಿತವು ಎದುರಿಸುತ್ತಿರುವ ಸವಾಲುಗಳನ್ನು ಈ ಕೆಳಕಂಡಂತೆ ತಿಳಿಯಬಹುದಾಗಿದ್ದು ಅವುಗಳೆಂದರೆ,

- ತಾಂತ್ರಿಕ ತೊಂದರೆಗಳು :– ಯುಯುಸಿಎಮ್ಎಸ್ ಪೋರ್ಟಲ್ ಹಲವು ತಾಂತ್ರಿಕ ಸಮಸ್ಯೆಗಳನ್ನು ಎದುರಿಸುತ್ತಿರುವ ಕಾರಣದಿಂದಾಗಿ ಸರಿಯಾಗಿ ಸ್ಪಂದಿಸದೆ ಪ್ರವೇಶ, ನೋಂದಣಿ, ಫಲಿತಾಂಶ ಪ್ರಕಟಣೆಯಲ್ಲಿ ಅಡಚಣೆಗಳಾಗುತ್ತಿವೆ ಹಾಗಾಗಿ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.
- ಶೈಕ್ಷಣಿಕ ದಾಖಲೆಗಳಲ್ಲಿ ವಿಳಂಬ :– ಹಲವಾರು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಅಂಕಪಟ್ಟಿಗಳನ್ನು, ಪದವಿ ಪ್ರಮಾಣಪತ್ರಗಳನ್ನು ಸ್ವೀಕರಿಸುವಲ್ಲಿ ತೀವ್ರತರವಾದ ಅಡಚಣೆಗಳನ್ನು ಎದುರಿಸುತ್ತಿದ್ದು, ಮುಂದಿನ ವಿದ್ಯಾಭ್ಯಾಸ ಮತ್ತು ಉದ್ಯೋಗಗಳಿಗೆ ಅರ್ಜಿ ಸಲ್ಲಿಸಲು ಸಂಕಟ ಪಡುವಂತಾಗಿದ್ದು, ಶೈಕ್ಷಣಿಕವಾಗಿ ತೊಂದರೆಯಾಗದಂತೆ ದಾಖಲಾತಿಗಳು ಶೀಘ್ರವಾಗಿ ವಿದ್ಯಾರ್ಥಿಗಳಿಗೆ ಎಟಕುವಂತೆ ಮಾಡಬೇಕಾಗಿದೆ.
- ಭದ್ರತಾ ಲೋಪಗಳು :– ಯುಯುಸಿಎಮ್ಎಸ್ ಪೋರ್ಟಲ್‌ನಲ್ಲಿ ವಿದ್ಯಾರ್ಥಿಗಳ ಅಂಕಗಳಿಗೆ, ಅಂಕಪಟ್ಟಿಗಳಿಗೆ ಸಂಬಂಧಿಸಿದಂತೆ ಗಂಭೀರ ಭದ್ರತಾ ಲೋಪಗಳು ಕಂಡುಬರುತ್ತಿರುವ ಕಾರಣದಿಂದ ಭದ್ರತಾ ಲೋಪಗಳನ್ನು ಸರಿಪಡಿಸಬೇಕಾಗಿದೆ.
- ಡಿಜಿಟಲ್ ವಿಭಜನೆ :– ಗ್ರಾಮೀಣ ಭಾಗದ ಕಾಲೇಜುಗಳಲ್ಲಿ ಇಂಟರ್ನೆಟ್ ಸಂಪರ್ಕ ಮತ್ತು ಮೂಲಸೌಕರ್ಯದ ಕೊರತೆಯಿಂದಾಗಿ ಈ ವ್ಯವಸ್ಥೆಯ ಪೂರ್ಣ ಲಾಭ ಪಡೆಯಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಎಲ್ಲಾ ಕಾಲೇಜುಗಳಿಗೆ ಇಂಟರ್ನೆಟ್ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಬೇಕಾಗಿದೆ.
- ಅನನುಭವಿ ಬಳಕೆದಾರರು :– ಅನೇಕ ಬಳಕೆದಾರರು ಈ ತಂತ್ರಜ್ಞಾನವನ್ನು ಬಳಸಿಕೊಂಡು ಕಾರ್ಯನಿರ್ವಹಿಸುವುದು ತ್ರಾಸದಾಯಕವೆಂದು ಭಾವಿಸಿರುವುದರಿಂದ ಎಲ್ಲಾ ಸಂಸ್ಥೆಗಳಲ್ಲಿ ಪರಿಣಾಮಕಾರಿಯಾಗಿ ಅಳವಡಿಸಿಕೊಂಡಿಲ್ಲದ ಕಾರಣ ನಿರೀಕ್ಷಿತ ಯಶಸ್ಸು ಲಭಿಸುತ್ತಿಲ್ಲ, ಹಾಗಾಗಿ ಕಾರ್ಯಾಗಾರಗಳ ಮುಖೇನ ಮಾರ್ಗದರ್ಶನ

ನೀಡಿದರೆ ಅನುಕೂಲಕರವಾಗುತ್ತದೆ.

- ಪಾವತಿಯ ಸಮಸ್ಯೆಗಳು :– ಪರೀಕ್ಷಾ ಅರ್ಜಿ, ಮರುಮೌಲ್ಯಮಾಪನದಂತಹ ಅರ್ಜಿಗಳಂತಹ ಪ್ರಕ್ರಿಯೆಗಳಲ್ಲಿ ಎರಡೆರಡು ಬಾರಿ ಹಣ ಕಡಿತವಾಗಿರುವ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಎದುರಿಸುತ್ತಿದ್ದಾರೆ, ಈ ಸಮಸ್ಯೆಗಳು ಮರುಕಳಿಸದಂತೆ ತಡೆಯಲು ಕ್ರಮಕೈಗೊಳ್ಳುವುದು ಅನಿವಾರ್ಯವಾಗಿದೆ.
- ಆಡಳಿತಾತ್ಮಕ ಅಡಚಣೆಗಳು :– ಕಾಲೇಜುಗಳ ಸಿಬ್ಬಂದಿಯು ಸ್ಥಳೀಯವಾಗಿ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗದಿರುವ ಕಾರಣಕ್ಕೆ ಮತ್ತು ಬೆಂಗಳೂರಿನಲ್ಲಿನ ಕೇಂದ್ರ ಕಚೇರಿಯ ಅನುಮತಿಗಾಗಿ ಕಾಯಬೇಕಾಗಿರುವುದರಿಂದ ಸಮಸ್ಯೆಗಳುಂಟಾಗುತ್ತಿದ್ದು, ಸ್ಥಳೀಯವಾಗಿ ಪರಿಹಾರಾತ್ಮಕ ಮಾರ್ಗಗಳನ್ನು ಕಲ್ಪಿಸಬೇಕಾಗಿದೆ.
- ತರಬೇತಿಯ ಕೊರತೆ :– ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಈ ಹೊಸ ತಂತ್ರಜ್ಞಾನಗಳನ್ನು ಬಳಸಲು ಸೂಕ್ತವಾದ ಹೆಚ್ಚಿನ ತರಬೇತಿಯ ಅಗತ್ಯವಿದೆ.

## 7. ಮುಕ್ತಾಯ

ಕರ್ನಾಟಕ ಸರ್ಕಾರದ ಇ–ಆಡಳಿತ ಕ್ರಮಗಳು ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ಸಾಮರ್ಥ್ಯ ಹೊಂದಿವೆ. ತಾಂತ್ರಿಕ ದೋಷಗಳನ್ನು ಸರಿಪಡಿಸಿ, ಗ್ರಾಮೀಣ ಮೂಲಸೌಕರ್ಯವನ್ನು ಬಲಪಡಿಸಿದರೆ, ಈ ಆಡಳಿತ ಸುಧಾರಣೆಗಳು ಕೇವಲ 'ಕಾಗದ ರಹಿತ' ವ್ಯವಸ್ಥೆಯಾಗದೆ 'ಗುಣಮಟ್ಟದ ಶಿಕ್ಷಣ' ನೀಡುವ ಸಾಧನವಾಗಲಿದೆ.

## ಪರಾಮರ್ಶನ ಗ್ರಂಥಗಳು:

1. ಕರ್ನಾಟಕ ಉನ್ನತ ಶಿಕ್ಷಣ ಇಲಾಖೆಯ ವಾರ್ಷಿಕ ವರದಿ.
2. ಯುಯುಸಿಎಮ್ಎಸ್‌ನ ಅಧಿಕೃತ ಜಾಲತಾಣ (uucms.karnataka.gov.in).
3. ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನುಷ್ಠಾನ ಮಾರ್ಗಸೂಚಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.